**ಸಾಕ್ಷಿಯನ್ನು ದಿಃ 24.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತವಾದ ದಿನ ನಾನು ನಮ್ಮ ಮನೆಯ ಮುಂದೆ ಬೆಳಿಗ್ಗೆ 8.00 ಗಂಟೆಯಲ್ಲಿ ಕುಳಿತಿದ್ದೆ. ಅಪಘಾತಕ್ಕೆ ಮೊದಲು ಬಸ್ಸು ಪೂರ್ವ ದಿಕ್ಕಿನಿಂದ ಬಂತು. ಬಸ್ಸು ನೋಡಿ ನಾನೇ ರಸ್ತೆಯ ಮಧ್ಯಕ್ಕೆ ಹೋದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ದೂರನ್ನು ನನ್ನ ಮಗ ಕೊಟ್ಟಿದ್ದಾನೆ. ಅಪಘಾತವಾದ ನಂತರ ಪೊಲೀಸರು ನನ್ನನ್ನು ವಿಚಾರಿಸಿಲ್ಲ. ಅಪಘಾತಕ್ಕೆ ಮೊದಲು ನಾನು ಗಾರೆ ಕೆಲಸ ಮಾಡುತ್ತಿದ್ದೆ. ತಿಂಗಳದ ಆದಾಯದ ಬಗ್ಗೆ ನನ್ನಲ್ಲಿ ದಾಖಲಾತಿ ಇಲ್ಲ.

ತಿಂಗಳಿಗೆ ರೂ.25,000/- ರಿಂದ 30,000/- ದುಡಿಯುತ್ತಿದ್ದೆ. ಅಪಘಾತವಾದ ಕೂಡಲೇ ನಾನು ಪಿರಿಯಾಪಟ್ಟಣದ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದು ನಂತರ ಮೈಸೂರಿನ ಪ್ರಜ್ವಲ್ ಆಸ್ಪತ್ರೆಗೆ ಸೇರಿದ್ದೇನೆ. ಮೈಸೂರಿನಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಪ್ರಜ್ವಲ್ ಆಸ್ಪತ್ರೆಯಲ್ಲಿ ನನ್ನ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಅಪಘಾತದಿಂದ ನನ್ನ ಕಾಲು ಜಜ್ಜಿ ಹೋಗಿತ್ತು. ತುಂಡಾಗಿರಲಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು 15 ದಿನ ದಾಖಲಾಗಿದ್ದೆ. ನನ್ನನ್ನು ಪ್ರಜ್ವಲ್ ಆಸ್ಪತ್ರೆಗೆ ದಿನಾಂಕ 10.06.2024 ರಂದು ದಾಖಲು ಮಾಡಿ ದಿನಾಂಕ 17.06.2024 ರಂದು ಬಿಡುಗಡೆಗೊಳಿಸಿದ್ದಾರೆ ಎಂದರೆ ಸರಿ. ಔಷಧಿ ಬಿಲ್ಲುಗಳಿಗೆ ಪೂರಕವಾದ ಸಲಹಾ ಚೀಟಿಗಳನ್ನು ಹಾಜರುಪಡಿಸಿಲ್ಲ.

ನಾನು ಹಾಜರುಪಡಿಸಿರುವ ಔಷಧಿ ಬಿಲ್ಲುಗಳನ್ನು ನಿ.ಪಿ-9 ಪ್ರಕರಣಕ್ಕೋಸ್ಕರ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಮುಂದುವರಿದ ಚಿಕಿತ್ಸೆಯ ಬಗ್ಗೆ ವೈದ್ಯರು ದಾಖಲೆ

ನೀಡಿಲ್ಲ ಎಂದರೆ ಸರಿ. ನಾನು ಮೊದಲಿನಂತೆ ದೈನಂದಿನ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದಷ್ಟು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.